ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭ (೨೨೬೫)

ಸದಸ್ಯರ ಹೆಸರು ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)

ಉತ್ತರಿಸುವ ಸಚಿವರು ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆಯಲ್ಲಿ ಬಹುತೇಕ ಸಹಕಾರಿ ಬ್ಯಾಂಕುಗಳು ರೈತರಿಗೆ ಸಾಲ ನೀಡುವ ಪರಿಸ್ಥಿತಿಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಈ ಸಹಕಾರಿ ಬ್ಯಾಂಕ್ ಗಳನ್ನು ಪುನಶ್ಚೇತನಗೊಳಿಸಲಾಗುವುದೇ?	ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಪ್ಯಾಕಿಂಗ್ ನಿಯಂತ್ರಣ ಅಧಿನಿಯಮ ೧೯೪೯ ರ ಪ್ರಕರಣ ೧೧(೧) ನ್ನು ಪಾಲನೆ ಮಾಡದ ಕಾರಣ ನಬಾರ್ಡ್‌ನಿರದ ಕೃಷಿ ಸಾಲ ಪುನರ್ಧನ ಸೌಲಭ್ಯಕ್ಕೆ ಅರ್ಹತೆ ಹೊಂದಿರುವುದಿಲ್ಲ ಆದರೂ ಈ ಬಾಂಕಿನ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಅಪೆಕ್ಸ್ ಬ್ಯಾಂಕಿನ ವತಿಯಿಂದ ೨೦೦೫-೬ನೇ ಸಾಲಿಗೆ ರೂ ೩೦೦೦-೦೦ ಲಕ್ಷಗಳ ಕೃಷಿ ಸಾಲ ಮಿತಿಯನ್ನು ನೀಡಲಾಗಿದ್ದು, ಇದು ಸುಸ್ತಿಯಾಗಿದದು, ಒಟ್ಟು ಮೊತ್ತ ರಊ ೩೫೫೭.೫೯ ಲಕ್ಷಗಳನ್ನು ಪುನಃ ನವೀಕರಿಸಿದೆ ೨೦೦೬-೦೭

		ನೇ ಸಾಲಿಗೆ ಕೃಷಿ ಸಾಲ ವಿತರಿಸಲು ಅನುಕೂಲವಾಗುವಂತೆ ಅಪೆಕ್ಸ್ ಬಾಂಕು ತನ್ನ ಸ್ವಂತ ನಿಧಿಯಿಂದ ರೂ ೫೦೦-೦೦ ಲಕ್ಷಗಳನ್ನು ಮೃದುಸಾಲ ರೂಪದಲ್ಲಿ ದೆಲ್ಲಾ ಬ್ಯಾಂಕಿಗೆ ಮಂಜೂರು ಮಾಡಿರುತ್ತದೆ ಸಾಲ ಎತ್ತುವಳಿ ಸಾಮರ್ಥ್ಯ ಹೊಂದಿರುವ ೧೬೭ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ಬ್ಯಾಂಕಿನ ಹಂತದಲ್ಲಿ ಯೋಜನೆಯನ್ನು ರೂಪಿಸಿಕೊಳ್ಳಲಾಗುತ್ತಿದ್ದು, ಸಂಘಗಳಿಗೆ ತ್ವರಿತ ಆದಾಯ ತರುವ ವ್ಯಾಪಾರಾಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಂಘದ ಆಡಳಿತ ಮಂಡಳಿ ಸದಸ್ಯನಿಗೆ ಮತ್ತು ಕಾರ್ಯದರ್ಶಿಗಳಿಗೆ ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ಸಹಯೋಗದೊಂದಿಗೆ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಡಿಸಿಸಿ ಬ್ಯಾಂಕು ಯೋಜಿಸುತ್ತಿದೆ
ಇ)	ಶೇಕಡಾ ೪ ರ ಬಡ್ಡಿ ದರ ಘೋಷಣೆಯಾದ ನಂತರ ಕೋಲಾರ ಜಿಲ್ಲೆಯಲ್ಲಿ ಸಹಕಾಖಇ ಬ್ಯಾಂಕ್ ಗಳು ಇದುವರೆವಿಗೂ ರೈತರಿಗೆ ವಿತರಿಸಿರುವ ಸಾಲದ	ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ ೧೯೪೯ರ ಪ್ರಕರಣ ೧೧(೧) ನ್ನು ಪಾಲಿಸಲು ವಿಫಲವಾಗಿರುವುದರಿಂದ

	ಹಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)	ನಬಾಡ್ ನ ಪುನರ್ಧನ ಸೌಲಭ್ಯ ದೊರೆಯದೆ ಇರುವುದರಿಂದ ಶೇಕಡ ೪ ರ ಬಡ್ಡಿ ದರದಲ್ಲಿ ಕೃಷಿ ಸಾಲ ವಿತರಿಸಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೯೩ (೨೨೪೬)

ಸದಸ್ಯರ ಹೆಸರು ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)

ಉತ್ತರಿಸುವ ಸಚಿವರು ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪ್ರಸ್ತುತ ವರ್ಷ ಹನಿ ನೀರಾವರಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)	ರೂ ೭೬೭೮ ಲಕ್ಷಗಳು ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ
ಆ)	ಇಲ್ಲಿಯವರೆಗೆ ತೋಟಗಾರಿಕಾ ಬೆಳೆಗಾರರಿಗೆ ಹನಿ ನೀರಾವರಿಗಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)	ರೂ ೫೦೬೯೫೧೧ ಲಕ್ಷಗಳು ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ